ತಾರೀಖು 30ನೆ ಜನವರಿ 1907.

ನಂ. 6758—ಸ್ಯಾನಿಟರಿ 156-06-7, ಕೋಲಾರ ಡಿಸ್ಟ್ರಿಕ್ಟ್ ಬೂರಿಂಗಪೇಟೆ ತಾಲ್ಲೂಕಿನ ಕೋಲಾರ ಗೋಲ್ಡ್ ಫೀಲ್ಡ್‌ಗೆ ಸೇರಿದ ಪೆದ್ದಪಲ್ಲಿ ಗ್ರಾಮಕ್ಕೆ ಸಿಂಗಮ್ಮನ ಜಾತ್ರಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟಲ್ಲಿ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್‌ಎಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫಿಬ್ರವರಿ 4ನೆ ತಾರೀಖಿನಿಂದ 1907ನೆ ಫಿಬ್ರವರಿ 8ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸಿ ಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 19ನೆ ಜನವರಿ 1907.

ನಂ. ಜೆ. 4305—ಜಿ. ಎಂ. 182-06—6, ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಅಂಡರ್ ಸೆಕ್ರಿಟರಿಯವರಾದ ಮಿ॥ ಕೆ. ಮಾರ್ತರವರಿಗೆ 1907ನೆ ಇಸವಿಯ ಜನವರಿ 17ನೆ ತಾರೀಖಿನಿಂದ ಎರಡು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

2. 1906ನೆ ಇಸವಿಯ ನವೆಂಬರು 26ನೆ ತಾರೀಖಿನ ಫೈನಾನ್ಷಲ್ 3850-2—ಜಿ. ಎಫ್. 161-06—7ನೆ ನಂಬರಿನ ಸರ್ಕಾರಿ ಹುಕುಮಿನಲ್ಲಿ ಮಂಜೂರ್ಮಾಡಲ್ಪಟ್ಟ ಹಂಗಾಮಿ ಏರ್ಪಾಡುಗಳು—ಎಂದರೆ, ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರ ಕಚೇರಿಯಲ್ಲಿ ಮಿ" ಟಿ. ತಂಬುಶೆಟ್ಟರು ಕೆಲಸ ಮಾಡೋಣವೂ, ಮಿ॥ ಎ. ಕೃಷ್ಣಸ್ವಾಮಯ್ಯಂಗಾರ್‌ನ್ನು ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ಕೆಲಸ ನೋಡಲು ನೇಮಕ ಮಾಡಿರೋಣವೂ, ಮಿ॥ ಮಾರ್ತರವರು ರಜಾ ಮೇಲೆ ಇರುವ ವರೆಗೆ ನಡೆಯುತ್ತಿರತಕ್ಕದ್ದು.

ತಾರೀಖು 23ನೆ ಜನವರಿ 1907.

ನಂ. ಜೆ. 2151—ಲೆಜಿಸ್. 27-06-2, 1906ನೆಯ ಇಸವಿಯ 2ನೆ ನಂಬರ್ ಮೈಸೂರು ಟ್ರಾಂವೆಗಳ ರೆಗ್ಯುಲೇಷನಿನ 12ನೆ ಪ್ರಕರಣವನ್ನು ಕುರಿತು, ಮೈಸೂರು ಸಂಸ್ಥಾನದ ಚೀಫ್ ಇಂಜನಿಯರೂ ಮತ್ತು ಪೂರ್ವ ಮತ್ತು ಪಶ್ಚಿಮ ಸರ್ಕಲುಗಳ ಸೂಪರಿಂಟೆಂಡಿಂಗ್ ಇಂಜನಿಯರುಗಳೂ ತಮ್ಮತಮ್ಮ ಅಧಿಕಾರ ಸರಹದ್ದುಗಳೊಳಗೆ ಟ್ರಾಂವೆಗಳನ್ನು ಪರೀಕ್ಷೆಮಾಡುವುದಕ್ಕೋಸ್ಕರ ಇಂಜನಿಸ್ಪರಾಗಿ ಇದರಿಂದ ಮೊಕರರ್ರಾಮಡಲ್ಪಟ್ಟಿರುತ್ತಾರೆ.

ತಾರೀಖು 28ನೆ ಜನವರಿ 1907.

ನಂ. ಜೆ. 2153—ಪೊ. 47-06-6, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಪ್ರೊಬೇಷನರಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಟಿಪ್ಪು ಸುಲ್ತಾನ್ ಅಲ್ಲಿಖಾರವರಿಗೆ 1906ನೆ ಇಸವಿ ಡಿಸೆಂಬರ್ 10ನೆ ತಾರೀಖಿನ ಲಾಗಾಯತ್ತು ಒಂದು ತಿಂಗಳೂ 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 18ನೆ ಜನವರಿ 1907.

ಪೇಟೆಂಟ್ ಎಂದರೆ ವಿಶೇಷಾಧಿಕಾರ ಪತ್ರಿಕೆ.

ನಂ. ಜೆ. 4594—ಜಿ. ಎಂ. 154-06-10. ಸ್ಯ 1894ನೆ ಇಸವಿಯ 11ನೆ ನಂಬರ್, (ನವೀನ ಕಲ್ಪನೆಗಳು ಮತ್ತು ನಕ್ಷೆಗಳು) ರೆಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಬಂದು ನವೀನ ಕಲ್ಪನೆಯು ಇದರಡಿ ಕಂಡ ವಿವರಣೆಯು ತಲಪಿರುತ್ತದೆ. ಮತ್ತು ಇಷ್ಟವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರಿಗೆ ಬರಕ್ಕುಕೊಂಡು ಬಂದು ರೂಪಾಯಿ ರುಸುಂ ಕೊಟ್ಟು ಅವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷಿಸಿ ನೋಡಲು ಅಡ್ಡಿ ಇರುವುದಿಲ್ಲ.

ಇಂಗ್ಲೆಂಡಿನಲ್ಲಿ ಲಂಡನ್ ಪಟ್ಟಣದ ಬಿಷಪ್ಸ್ ಗೇಟ್ ಬೀದಿಯ 25ನೆ ನಂಬರ್ ಮನೆಯಲ್ಲಿರುವ ಧಾತುಕೋಧಕ ಮಿ॥ ಚಾರ್ಲ್ಸ್ ಬರ್ಟರ್ಸ್ ಯವರಿಂದ ಮಾಡಲ್ಪಟ್ಟಿದ್ದು.

"ಜಿಗಟು ಪದಾರ್ಥವನ್ನು ಶೋಧಿಸುವ ವಿಧಾನ ಮತ್ತು ಅದಕ್ಕೆ ಉಪಕರಣಗಳು."

ತಾರೀಖು 24ನೆ ಜನವರಿ 1907.

ನಂ. ಫೈ 5661—ಜಿ. ಎಫ್. 100-06—3, ಸಂಸ್ಥಾನದ ಹುಜೂರ್ ಖಜಾನೆಯ ಚಾರ್ಜಿನಲ್ಲಿರುವ ಅಫಿಸರಾದ ಮಿ॥ ಕೆ. ಕೃಷ್ಣಯ್ಯಂಗಾರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 241ನೆ ಸಬ್‌ರೂಲಿನಲ್ಲಿ ಮೇರೆ 1907ನೆ ಇಸವಿಯ ಜನವರಿ 16ನೆ ತಾರೀಖಿನ ಅಪರಾಹ್ನದಿಂದ ಬಂದು ತಿಂಗಳವರೆಗೆ ಸಂಬಳವಿಲ್ಲದ ಅಸಾಧಾರಣ ರಜಾ ಕೊಟ್ಟಿದೆ.

2. ಮಿ॥ ಕೃಷ್ಣಯ್ಯಂಗಾರು ರಜಾ ಮೇಲೆ ಇರುವ ವರೆಗೆ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ, ಅಸಿಸ್ಟೆಂಟ್ ಕಂಟ್ರೋಲರ್ ಮಿ॥ ಪಿಷ್ಟೋವಂತ ಬಾಡಾಮಿಯವರು ಸದರಿ ಹುಜೂರ್ ಖಜಾನೆಯ ಚಾರ್ಜಿನಲ್ಲಿ ಇಡಲ್ಪಟ್ಟಿರುವರು.

ತಾರೀಖು 30ನೆ ಜನವರಿ 1907.

ನಂ. ಜೆ. 2173—ಪ್ರಜರ್ಸ್ 66-06—3, ಸ್ಯ 1907ನೆ ಇಸವಿಯ ಜನವರಿ 25ನೆ ತಾರೀಖಿನ ಪೂರ್ವಾಹ್ನ ಮೈಸೂರು ಸಂಸ್ಥಾನದ ಬ್ಯಾಂಡ್‌ಮೇಳಗಳಿಗೆ ಇನ್‌ಸ್ಪೆಕ್ಟರ್ ಜನರಲ್ ರವರ ಉದ್ಯೋಗದ ಚಾರ್ಜನ್ನು ಮಿ॥ ಪಿ. ಎಸ್. ಅಚ್ಯುತರಾಯರವರು ಒಪ್ಪಿಸಿದರು. ಮತ್ತು ಮೇಜರ್ ಎಚ್. ಇ. ಡ್ರೇಕ್‌ಬ್ರಾಕ್ಮನ್, ಐ. ಎಂ. ಎಸ್., ರವರು ವಹಿಸಿದರು.